

# ಎದೆಯಲ್ಲಿ ಉರಿ ಏಕೆ ಈ ಪರಿ?

**ಎದೆಯಲ್ಲಿ ಉರಿ, ಬಾಯಿಯಲ್ಲಿ ಹುಳಿ ಮಿಶ್ರಿತ ಕಹಿ ರುಚಿ, ಮಲಗಿದಾಗ ಅಸಾಧ್ಯ ಎದೆನೋವು, ನಿದ್ರೆ ಮಾಡಲು ತೊಂದರೆ ಮುಂತಾದ ಲಕ್ಷಣಗಳನ್ನು ಹೊಂದಿರುವ 'ಆಸಿಡ್ ರಿಫ್ಲಕ್ಸ್ ಎಂಬ ಕಾಯಿಲೆ ಗ್ಯಾಸ್ಟ್ರಿಕ್‌ನ ಮತ್ತೊಂದು ರೂಪ.**

**■ ಉಮಾ ಅನಂತ್**



ಐವತ್ತೊಂದರ ಹರೆಯರ ವಿನುತಾಗೆ ಎದೆಯಲ್ಲಿ ವಿಪರೀತ ಉರಿ, ರಾತ್ರಿ ಮಲಗಿದ ಮೇಲೆ ಎದೆಯಲ್ಲಿ ಹಿಂಡಿದಂತಹ ಅನುಭವ, ಬಾಯಿಯಲ್ಲಿ ಹುಳಿತೇಗು, ಇದರಿಂದ ನಿದ್ರೆ ದೂರ. ಗ್ಯಾಸ್ಟ್ರಿಕ್ ಇರಬಹುದು ಎಂದು ಒಂದು ವಾರ ಮನೆಯಲ್ಲೇ ಉಪಚಾರ ಮಾಡಿಕೊಂಡಿದ್ದಾಯಿತು. ಆದರೂ ಪರಿಹಾರ ಕಾಣಲಿಲ್ಲ. ಹಗಲೆಲ್ಲ ಚೆನ್ನಾಗಿಯೇ ಇರುವ ವಿನುತಾ ರಾತ್ರಿ ಮಾತ್ರ ಪಡುವ ಪಾಡು ಅಷ್ಟಿಷ್ಟಲ್ಲ. ಎದೆನೋವು ಹೃದಯದ ಸಮಸ್ಯೆ ಇರಬಹುದು ಎಂದು ಗಾಬರಿಯಿಂದ ಹೃದ್ರೋಗ ತಜ್ಞರನ್ನು ಭೇಟಿ ಮಾಡಿದರು, ಅವರ ಸಲಹೆಯಂತೆ ಇಸಿಜಿ, ಇಕೊ ಟೆಸ್ಟ್ ಎಲ್ಲ ಮಾಡಿಸಿದಾಗ ಎಲ್ಲವೂ ನಾರ್ಮಲ್. ಹಾಗಾದರೆ ಈ ಪರಿ ಎದೆಯುರಿಗೆ ಕಾರಣವಾದರೂ ಏನು?

ವಿನುತಾರ ಸಮಸ್ಯೆಯನ್ನು ಕೂಲಂಕಷವಾಗಿ ವೈದ್ಯರು ಸಮಾಲೋಚಿಸಿದಾಗ ಇವರಿಗೆ 'ಆಸಿಡ್ ರಿಫ್ಲಕ್ಸ್' ಸಮಸ್ಯೆ ಇರುವುದು ಪತ್ತೆಯಾಯಿತು. ಹೊಟ್ಟೆಯುಬ್ಬರದ ಇನ್ನೊಂದು ಬಗೆ ಆಗಿರುವ ಈ ತೊಂದರೆಗೆ ತಜ್ಞರಿಂದ ಸಲಹೆ ಪಡೆದುಕೊಂಡ ಬಳಿಕ ಸುಧಾರಣೆ ಕಂಡುಬಂತು.

ಎದೆಯಲ್ಲಿ ಉರಿ, ಬಾಯಿಯಲ್ಲಿ ಹುಳಿ ಮಿಶ್ರಿತ ಕಹಿ ರುಚಿ, ಮಲಗಿದಾಗ ಅಸಾಧ್ಯ ಎದೆನೋವು, ನಿದ್ರೆ ಮಾಡಲು ತೊಂದರೆ ಮುಂತಾದ ಲಕ್ಷಣಗಳನ್ನು ಹೊಂದಿರುವ ಈ ಕಾಯಿಲೆ ಗ್ಯಾಸ್ಟ್ರಿಕ್‌ನ ಮತ್ತೊಂದು ರೂಪ. ಇದು ದೀರ್ಘಕಾಲದ ಆಮ್ಲ ಹಿಮ್ಮುಖ ಹರಿವು ಎಂದರೆ ಗ್ಯಾಸ್ಟ್ರೊಸೊಫೇಜಿಯಲ್ ರಿಫ್ಲಕ್ಸ್ ಡಿಸೀಸ್ (**Gastroesophageal Reflux Disease– GERD**), ಇದನ್ನು 'ಆಸಿಡ್ ರಿಫ್ಲಕ್ಸ್' ಎಂದೂ ಕರೆಯುತ್ತಾರೆ, ಇದರಲ್ಲಿ ಹೊಟ್ಟೆಯ ಆಮ್ಲವು ಅನ್ನನಾಳಕ್ಕೆ ಹಿಂತಿರುಗುತ್ತದೆ, ಇದರಿಂದ ಎದೆಯಲ್ಲಿ ಉರಿ ಮತ್ತು ಎದೆನೋವು ಬರುತ್ತದೆ. ಕೆಲವರಿಗೆ ಹುಳಿತೇಗು ಕಾಡುವ ಸಾಧ್ಯತೆಯೂ ಇದೆ.

## ಏನಿದು ಆಸಿಡ್ ರಿಫ್ಲಕ್ಸ್?

ಸಾಮಾನ್ಯವಾಗಿ ಹೊಟ್ಟೆಯಿಂದ ಅನ್ನನಾಳಕ್ಕೆ ಆಹಾರ ಹೋಗುತ್ತದೆ, ಆದರೆ ಈ ಕಾಯಿಲೆಯಲ್ಲಿ ಅನ್ನನಾಳದ ಕೆಳಭಾಗದ ಕವಾಟ ಸರಿಯಾಗಿ